

## ಅಬ್ಬೇ ರೋಡ್‌ನ ಐಕಾನಿಕ್ ಚಿತ್ರ

Abbey Road ಆಲ್ಬಂನ ಕವರ್ ಫೋಟೊ ಪ್ರಪಂಚದ ಅತಿ ಹೆಚ್ಚು ಪರಿಚಯದ ಫೋಟೊಗಳಲ್ಲಿ ಒಂದು. 1969ರಲ್ಲಿ ಬಂದ ಆ ಆಲ್ಬಮ್‌ನ ಕವರ್‌ಗಾಗಿ ಪೌಲ್ ಬರೆದ ಸ್ಕೆಚ್ ಆಧಾರದ ಮೇಲೆ ಅವರ ಕ್ರಿಯೇಟಿವ್ ಡೈರೆಕ್ಟರ್ ಕೋಶ್‌ನ ಐಡಿಯಾದಲ್ಲಿ ಬಂದ ಫೋಟೊ ಇದು. ನಾಲ್ಕು ಜನ ಜೀಬ್ರಾ ಕ್ರಾಸಿಂಗ್ ಅನ್ನು ದಾಟುತ್ತಿರುವ ಈ ಸಾಮನ್ಯ ದೃಶ್ಯ ಇಪ್ಪತ್ತನೆ ಶತಮಾನದ ಐಕಾನಿಕ್ ಫೋಟೊಗಳಲ್ಲಿ ಒಂದೆಂದು ಗುರುತಿಸಲ್ಪಟ್ಟಿದೆ.

ಬೀಟಲ್ಸ್‌ನ ಅಭಿಮಾನಿಗಳಲ್ಲದೆ ಅವರ ಬಗ್ಗೆ ಗೊತ್ತಿಲ್ಲದವರೂ ಆ ಜಾಗದಲ್ಲಿ ಬಂದು ಅದೇ ರೀತಿಯ ಫೋಟೊ ತೆಗೆದುಕೊಳ್ಳುವುದು 1969ರಿಂದಲೂ ಸಾಮಾನ್ಯ ಸಂಗತಿ. 2010ರಲ್ಲಿ ಇಂಗ್ಲಿಷ್ ಹೆರಿಟೇಜ್‌ನ ಭಾಗವನ್ನಾಗಿ ಮಾಡಿದ್ದು ಅದರ ಜನಪ್ರಿಯತೆಗೆ ಮತ್ತೊಂದು ಸಾಕ್ಷಿ.



ಅಬ್ಬೇ ರೋಡ್‌ನ ಐಕಾನಿಕ್ ಚಿತ್ರ ಎಷ್ಟು ಜನಪ್ರಿಯವೆಂದರೆ ಅದನ್ನು ಬೀಟಲ್ಸ್ ತಂಡದ ಅಭಿಮಾನಿಗಳು ಹಲವು ಸಲ ಮರುಸೃಷ್ಟಿಮಾಡಿದ್ದಾರೆ. ಬೀಟಲ್ಸ್ ತಂಡಕ್ಕೆ ಐವತ್ತು ವರ್ಷ ತುಂಬಿದ ಸಂದರ್ಭದಲ್ಲಿ ಮರುಸೃಷ್ಟಿ ಮಾಡಿದ ಚಿತ್ರವೊಂದು ಇಲ್ಲಿದೆ ನೋಡಿ

ತಂಡದ ಸದಸ್ಯರ ಸಂಖ್ಯೆ ನಾಲ್ಕಕ್ಕೆ ಇಳಿಯಿತು.

### ಅಬ್ಬೇ ರೋಡ್ ಸ್ಟುಡಿಯೊ

ಮ್ಯಾನೇಜರ್ ಬ್ರಿಯಾನ್‌ನ ಸತತ ಪ್ರಯತ್ನದ ಫಲವಾಗಿ EMI ಸ್ಟುಡಿಯೊದೊಂದಿಗೆ ಹಾಡುಗಳ ರೆಕಾರ್ಡಿಂಗ್‌ಗೆ ಒಪ್ಪಂದವಾಗಿ, ಲಂಡನ್‌ನ ಅಬ್ಬೇ ರೋಡ್ ಸ್ಟುಡಿಯೊದಲ್ಲಿ ರೆಕಾರ್ಡಿಂಗ್ ಕೆಲಸ ಶುರುವಾಯಿತು. ಆಗಲೇ ಪೀಟ್ ಬೆಸ್ಟ್‌ನ ಡ್ರಮ್ಮಿಂಗ್ ಸ್ಟುಡಿಯೊದವರಿಗೂ ಉಳಿದ ಸದಸ್ಯರಿಗೂ ಸಾಲದೆಂದನಿಸಿ ರಿಂಗೋ ಸ್ಟಾರ್ ಎಂಬ ಹೊಸ ಡ್ರಮ್ಮರ್‌ನನ್ನು ತಂಡಕ್ಕೆ ಸೇರಿಸಿಕೊಳ್ಳಲಾಯಿತು. ಆ ನಾಲ್ವರೇ 'ದಿ ಬೀಟಲ್ಸ್'ನ ನಾಲ್ಕು ಬೀಟಲ್‌ಗಳು. ಮುಂದಿನ ದಿನಗಳಲ್ಲಿ ತಮ್ಮ ನಾಲ್ವರ ತಂಡ ಜಗತ್ತಿನ ಸಂಗೀತ–ಸಂಸ್ಕೃತಿ ಕ್ಷೇತ್ರಗಳಲ್ಲಿ ಚಂಡಮಾರುತವನ್ನು ಎಬ್ಬಿಸಲಿದೆಯೆಂದು ಆಗವರಿಗೆ ಸಣ್ಣ ಕಲ್ಪನೆಯೂ ಇದ್ದಿರಲಿಕ್ಕಿಲ್ಲ. ಆಗಲೇ ಬಂದದ್ದು 'love me do' (bit.ly/2RbYsV6) ಮುಂತಾದ ಹಾಡುಗಳು. ಅವು ಹೊರಬರುತ್ತಿದ್ದಂತೆ ಹಿಂದೆಂದೂ ಇರದ ಪ್ರಚಂಡ ಪ್ರಸಿದ್ಧಿಯನ್ನು ಗಳಿಸಿದವು.

### ಪ್ರಸಿದ್ಧಿಯ ಪರಾಕಾಷ್ಠೆ

ಪ್ರಪಂಚದ ಹದಿಹರೆಯದ ಹೆಣ್ಣುಮಕ್ಕಳ ಮೇಲೆ ಸಮ್ಮೋಹನ ಜಾಲ ಬೀಸಿದ, ತಮ್ಮ ಅಸ್ತಿತ್ವಕ್ಕಾಗಿ ಹೊಸ ಅಭಿವ್ಯಕ್ತಿಯ ಪರಿಭಾಷೆಗಳಿಗಾಗಿ ತಟಪಟ ಕುದಿಯುತ್ತಿದ್ದ ಹುಡುಗರಿಗೆ ತಟ್ಟಂತೆ ಮಿಂಚಿನ ದಿಕ್ಸೂಚಿಯಂತೆ ಒದಗಿದ ಬೀಟಲ್ಸ್ ಎಂಬ ಸಂಗೀತ ಮಂತ್ರಮಾಯೆ ನಿಧಾನಕ್ಕೆ ಎಲ್ಲೆಡೆ ಹರಡತೊಡಗಿದ್ದು ಆಗಲೇ. ಬ್ರಿಟನ್‌ನ ಮನೆ ಮನೆಗಳಲ್ಲಿ ಅವರ ಹಾಡಿನ ತಟ್ಟೆಗಳು ಗರಗರನೆ ತಿರುಗತೊಡಗಿದವು.

ಪೌಲ್ ಮತ್ತು ಜಾನ್ ಕ್ವಾರಿಮೆನ್ ಕಾಲದಿಂದಲೂ ಒಟ್ಟಿಗೆ ಸೇರಿ ಹಾಡುಗಳನ್ನು ರಚಿಸುತ್ತಿದ್ದರು. 1962ರಲ್ಲಿ ಅವರ 'please please me' (bit.ly/3aVcvX7) ಹೊರಬಿತ್ತು. ಯುವಜನತೆ ಕಿಂದರಿಜೋಗಿಯ ಕೊಳಲಿನಂತೆ ಅದನ್ನು, ಅವರನ್ನು ಹಿಂಬಾಲಿಸತೊಡಗಿದರು. ಬೀಟಲ್ಸ್‌ನ ಹಾಡಿಗೆ ಕುಣಿಯದವರೇ ಇಲ್ಲ ಎಂಬಂತಾಯಿತು. ಅಲ್ಲಿಂದ ಶುರುವಾದ ಅವರ ಮಾಂತ್ರಿಕತೆ ಅವರು ಬೇರಾಗುವವರೆಗೂ ಹಾಗೆಯೇ ಮುಂದುವರೆಯಿತು. ಎಲ್ಲ ಚಾರ್ಟುಗಳಲ್ಲಿ ಅನೇಕ ಹಾಡುಗಳು ನಂಬರ್ ಒನ್ ಆಗಿ ಮೆರೆದವು.

ಪ್ರಸಿದ್ಧಿ ಹೆಚ್ಚಿದಂತೆ ಮಾಧ್ಯಮಗಳು ಅವರ ಹಿಂದೆ ಬಿದ್ದಾಗ ಅವಕ್ಕೆ ಬೀಟಲ್ಸ್‌ಗಳು ನೀಡುತ್ತಿದ್ದ ಉತ್ತರಗಳು ಉಡಾಫೆಯಿಂದ, ಆ ಕಾಲಕ್ಕಿದ್ದ ಸಿದ್ಧ ಮಾದರಿಗಳಿಂದ ಹೊರತಾದ, ಯಾವುದಕ್ಕೂ ಕ್ಯಾರೆ ಅನ್ನದ ರೀತಿಯಲ್ಲಿರುತ್ತಿದ್ದವು. ಅದರಿಂದಾಗಿ ಅವರ ಮೇಲಿನ ಕುತೂಹಲ ಇನ್ನೂ ಹೆಚ್ಚಿತು. ಆ ಕಾಲಕ್ಕೆ ಹಿರಿಯರು ಇಷ್ಟಪಡದಿದ್ದ ಅವರ ಉದ್ದ ಕೂದಲಿನ ಶೈಲಿ, ಹಿರಿಯರನ್ನು ತಿರಸ್ಕರಿಸುವ ಹೊಸ ಹುಡುಗರ ವೇಷವಾಯಿತು. ಅವರ ಸಂಗೀತವು ಆ ದಶಕದಲ್ಲಿ ಮುನ್ನೆಲೆಗೆ ಬರುತ್ತಿದ್ದ 'ಪ್ರತಿಸಂಸ್ಕೃತಿ'ಗೆ ಸಂವಾದಿಯಾಗಿ ಬೆಳೆದು ಜನರನ್ನು ಸ್ವಂತದ ದಾರಿ ತುಳಿಯಲು ಪ್ರೇರೇಪಿಸಿತು. ಯುವಜನರ ಐಕಾನ್ ಆಗಿ ಬೀಟಲ್ಸ್ ಪ್ರಜ್ವಲಿಸತೊಡಗಿತು.

ಅವರು ಲೈವ್ ಪರ್ಫಾರ್ಮೆನ್ಸ್‌ಗಳಿಗಾಗಿ ಹೊರದೇಶಗಳಿಗೆ ಹೋದಾಗ ಎರಡೂ ಕಡೆಯ ಏರ್‌ಪೋರ್ಟ್‌ಗಳಲ್ಲಿ ಸಾವಿರ ಸಾವಿರ ಸಂಖ್ಯೆಯಲ್ಲಿ ಅಭಿಮಾನಿಗಳು ಅವರ ಸಣ್ಣದೊಂದು ಕಣ್ನೋಟಕ್ಕಾಗಿ ಕಾಯತೊಡಗಿದರು. ಒಮ್ಮೊಮ್ಮೆಯಂತೂ ಅಭಿಮಾನಿಗಳನ್ನು ನಿಯಂತ್ರಿಸಲು ಹೈ ಪ್ರೆಷರಿನ ನೀರನ್ನು ಬಳಸಬೇಕಾಯಿತು. ಪ್ರದರ್ಶನದ ಸಮಯದಲ್ಲಿ ಹೆಣ್ಣುಮಕ್ಕಳ ಎತ್ತರದ ಶ್ರುತಿಯ ಕೂಗು ಸ್ಟೇಡಿಯಂಗಳಲ್ಲಿ ಪ್ರತಿಧ್ವನಿಸತೊಡಗಿತು. ಬೀಟಲ್ಸ್ ತಮಗೆಂದೇ ವಿಶೇಷವಾಗಿ ತಯಾರಿಸಿದ ಆಂಪ್ಲಿಫೈಯರುಗಳನ್ನು ಬಳಸಿಕೊಳ್ಳಬೇಕಾಗುವಂತೆ ಅವರ ಕೂಗು ಇರುತ್ತಿತ್ತು. ಈ ರೀತಿಯ ಅಭಿಮಾನಿಗಳ ಹುಚ್ಚೆನಂತಹ ಪ್ರೇಮ 'ಬೀಟಲ್‌ಮೇನಿಯಾ' ಎಂಬ ನುಡಿಗಟ್ಟನ್ನೇ ಹುಟ್ಟಿಹಾಕಿತು.

ನಂತರ ಬಂದ 'I want to hold your hand' (bit.ly/2X6N14R) ಮುಂತಾದ ಹಾಡುಗಳ ತಟ್ಟೆಗಳು ಇಂಗ್ಲೆಂಡ್ ಅಲ್ಲದೆ ಅಮೆರಿಕದಲ್ಲೂ ಲಕ್ಷಗಟ್ಟಲೆ ಖರ್ಚಾದವು. ಅಮೆರಿಕ ಪ್ರವಾಸದಿಂದ